# <u>ಸಿವಿಲ್ ನ್ಯಾಯಾಧೀಶರು  ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.</u>
## <u>ಹಿರೇಕೆರೂರು.</u>
## <u>ಸಿ.ಸಿ.ನಂಬರ್‌ಃ223/2016</u>

ಸಿಡಬ್ಲ್ಯೂಃ 5

ಪಿಡಬ್ಲ್ಯೂಃ5

| | | |
|---|---|---|
| ಸಾಕ್ಷಿಯ ಹೆಸರು | : | ಆರೀಫಾಬಾನು |
| ಗಂಡನ  ಹೆಸರು | : | ರಿಯಾಜ್ ಅಹಮದ್ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಕಾಗಿನೆಲೆ |

ಇಂದು ದಿನಾಂಕಃ 16.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

<u>**ಮುಖ್ಯ ವಿಚಾರಣೆಃ**</u> ಮಾನ್ಯ ಎಪಿಪಿಯವರಿಂದಃ

ಚಾಸಾ-1 ನನ್ನ ಮಗಳು. 2014 ರ ಲ್ಲಿ ಚಾಸಾ-1 ರವರನ್ನು 1ನೇ ಆರೋಪಿಗೆ ಮದುವೆ ಮಾಡಿಕೊಟ್ಟಿದ್ದೆವು. ಮದುವೆಯಾದ ನಂತರ ಚಾಸಾ-1 ರವರು ತನ್ನ ಗಂಡನ ಮನೆಯಾದ ಚಿಕ್ಕೇರೂರನಲ್ಲಿ ವಾಸವಾಗಿದ್ದರು. ಮದುವೆಯಾದ ನಂತರ 5 ತಿಂಗಳ ಕಾಲ ಚೆನ್ನಾಗಿದ್ದರು. ಮದುವೆಯ ಸಮಯದಲ್ಲಿ 2 ತೊಲ ಬಂಗಾರ, 50,000/- ರೂ ಕೊಡಬೇಕು ಎಂದು ಮಾತುಕತೆಯಾಗಿತ್ತು, ಆದರೆ ಆರೋಪಿತರು ಮದುವೆಯ ಸಮಯದಲ್ಲಿ 1 ಲಕ್ಷದ 5 ಸಾವಿರ ರೂ ಹಣವನ್ನು ಪಡೆದುಕೊಂಡಿರುತ್ತಾರೆ.  ನಂತರ ಚಾಸಾ-1 ರವರಿಗೆ ನೀನು ಬಂಗಾರವನ್ನು ತಂದಿಲ್ಲ, ನನ್ನ ಮಗನಿಗೆ ಬೇರೆ ಮದುವೆ ಮಾಡುತ್ತೇನೆ ಎಂದು ಹೇಳಿ ಹಿಂಸೆ ಮಾಡುತ್ತಿದ್ದರು. ನಂತರ ಈ ಬಗ್ಗೆ 2016 ರಲ್ಲಿ ಚಾಸಾ-1 ಮತ್ತು ಆರೋಪಿತರಿಗೆ ಜಗಳವಾಗಿದ್ದು ಆಗ ಊರಿನ ಹಿರಿಯರು ಸೇರಿ ಚಾಸಾ-1 ರವರು ಹಾಗೂ 1ನೇ ಆರೋಪಿ ಪ್ರತ್ಯೇಕವಾಗಿ ವಾಸವಾಗಿರಬೇಕು ಎಂದು ಮಾತುಕತೆಯಾಗಿತ್ತು. ಅದರಂತೆ 1ನೇ ಆರೋಪಿ ಬೇರೆ ಮನೆಯನ್ನು ಮಾಡಿ 6 ದಿನಗಳ ಕಾಲ ವಾಸವಾಗಿದ್ದರು. 1ನೇ ಆರೋಪಿ ತನ್ನ ತಂದೆ ತಾಯಿ ಮನೆಯಲ್ಲಿ ಊಟ ಮಾಡುತ್ತಿದ್ದು ಚಾಸಾ-1 ರವರನ್ನು ಉಪವಾಸ ಇಡುತ್ತಿದ್ದರು. ನಂತರ 1ನೇ ಆರೋಪಿ ನಮಗೆ ಕರೆ ಮಾಡಿ ಕರೆದಿದ್ದು, ನಂತರ ಆರೋಪಿತರೆಲ್ಲರೂ ನಿಮ್ಮ ಮಗಳಿಗೆ ಸೀಮೆ ಎಣ್ಣೆ ಹಾಕಿ ಸುಡುತ್ತಿದ್ದೇವೆ ಎಂದು ಬಂದು ನೋಡಿ ಬಿಡಿ ಎಂದು ಹೇಳಿರುತ್ತಾರೆ. ನಾವು ಅಲ್ಲಿಗೆ ಹೋದಾಗ ಆರೋಪಿತರೆಲ್ಲರೂ ನನ್ನನ್ನು ಹೊಡೆದಿರುತ್ತಾರೆ. ನಂತರ ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಈ ಬಗ್ಗೆ ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದು ನಾನು ಈ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ.

<u>**ಪಾಟೀ ಸವಾಲುಃ**</u> ಆರೋಪಿತರ ಪರ ಶ್ರೀ ವಿ ವಿ ಎಂ ವಕೀಲರಿಂದಃ

1ನೇ ಆರೋಪಿ ನಮಗೆ ರಾತ್ರಿ ಸಮಯ ಕರೆ ಮಾಡಿದ್ದು ಆಗ ಸಮಯ ಎಷ್ಟಾಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ನಾವು ಬೆಳಿಗ್ಗೆ 9 ಗಂಟೆಗೆ ಆರೋಪಿತರ ಮನೆಗೆ ಬಂದಿರುತ್ತೇವೆ. ಆ ರೀತಿ 1ನೇ ಆರೋಪಿ ಕರೆ ಮಾಡಿದ 6 ದಿನಗಳ ನಂತರ ನಾವು ಆರೋಪಿತರ ಮನೆಗೆ ಬಂದಿರುತ್ತೇವೆ. ಆ ದಿನದಂದು ಆರೋಪಿತರ ಮನೆಗೆ ನಾನು ಮತ್ತು ಚಾಸಾ-6 ರವರು ಬಸ್‌ನಲ್ಲಿ ಬಂದಿದ್ದೆವು. ನಾವು ಮೊದಲು ನನ್ನ ಮಗಳ ಮನೆಗೆ ಹೋಗಿದ್ದು ನಂತರ 1ನೇ ಆರೋಪಿ ತನ್ನ ತಂದೆ ತಾಯಿಗೆ ಕರೆ ಮಾಡಿ ಅವರನ್ನು ಅಲ್ಲಿಗೆ ಕರೆಯಿಸಿಕೊಂಡಿರುತ್ತಾರೆ. ನಾವು ಚಾಸಾ-1 ರವರ ಮನೆಯಲ್ಲಿ ಸುಮಾರು 10 ನಿಮಿಷಗಳ ಕಾಲ ಇದ್ದೆವು. 1ನೇ ಆರೋಪಿ ರಾತ್ರಿ ನನಗೆ ಕರೆ ಮಾಡಿದ್ದ ಬಗ್ಗೆ ನಾನು ಪೋಲಿಸರಿಗೆ ಹೇಳಿರುತ್ತೇನೆ. ಪೋಲಿಸರು ಚಾಸಾ-1 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ಮಾತ್ರ ಪಡೆದುಕೊಂಡಿರುತ್ತಾರೆ.

2. ನನ್ನನ್ನು ಮನೆಯ ಹೊರಗೆ ಹೊಡೆದಿರುತ್ತಾರೆ. ಚಾಸಾ-1 ರವರ ಮನೆಯ ಅಕ್ಕ ಪಕ್ಕದಲ್ಲಿ ಇತರರ ಮನೆಗಳು ಇರುತ್ತವೆ. ಗಲಾಟೆ ನಡೆಯುವಾಗ ಅಕ್ಕ ಪಕ್ಕದ ಮನೆಯವರು ಸೇರಿದ್ದರು. ಆ ರೀತಿ ಎಷ್ಟು ಜನ ಸೇರಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ಅವರ ಹೆಸರುಗಳು ಹೇಳಲು ಆಗುವುದಿಲ್ಲ. ಗಲಾಟೇ ಸಮಾುರು 30 ನಿಮಿಷಗಳ ಕಾಲ ಆಗಿರುತ್ತದೆ. ಆಸ್ಪತ್ರೆಗೆ ನಾವು ಆಂಬುಲೆನ್ಸ ನಲ್ಲಿ ಹೋಗಿರುತ್ತೇವೆ. ಚಿಕ್ಕೇರೂರನಲ್ಲಿ ಆ ದಿನದಂದು ಆಸ್ಪತ್ರೆ ಬಂದ್ ಇದ್ದ ಕಾರಣದಿಂದ ಹಾವೇರಿ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ದನ ಕೊಯ್ಯುವಂತಹ ಜಾಗ ಚಾಸಾ-1 ರವರ ಮನೆಯ ದಕ್ಷಿಣಕ್ಕೆ ಇದೆ. ಸದರಿ ಜಾಗ ಯಾರಿಗೆ ಸೇರಿದ್ದು ಎಂದು ನನಗೆ ಹೇಳಲು ಆಗುವುದಿಲ್ಲ.

3. ಆ್ರೋಪಿತರಿಗೆ 1 ಲಕ್ಷ 50 ಸಾವಿರ ರೂ ನಾವು ಕೊಟ್ಟ ಬಗ್ಗೆ ದಾಖಲೆ ಇರುತ್ತದೆ. ಆ ರೀತಿ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5 ತಿಂಗಳ ನಂತರ ಆರೋಪಿತರು ಕಿರುಕುಳ ನೀಡಲು ಪ್ರಾರಂಬಿಸಿದ ನಂತರ ನಮಗೆ ದೂರನ್ನು ನೀಡಲು ನಮಗೆ ಯಾವುದೇ ತೊಂದರೆ ಇರುಲಿಲ್ಲ ಆರೋಪಿತರು ಯಾವುದೇ ಹಿಂಸೆಯನ್ನು ನೀಡಿಲ್ಲದಿದ್ದ ಕಾರಣದಿಂದ ನಾವು ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾವು ಚಾಸಾ-1 ರವರನ್ನು ಮನೆಗೆ ಹಿರಿಯರ ಹಬ್ಬಕ್ಕೆಂದು ಕರೆಯಿಸಿರುತ್ತೇವೆ ಎಂದರೆ ಸರಿಯಲ್ಲ. ನಂತರ ನಾವು ಚಾಸಾ-1 ರವರನ್ನು ಆರೋಪಿತರ ಮನೆಗೆ ಕಳುಹಿಸಿಯೇ ಇಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರು ನನ್ನನ್ನು ಹೊಡೆದ ಬಗ್ಗೆ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿತರು ಚಾಸಾ-1 ರವರಿಗೆ ಯಾವುದೇ ಕಿರುಕುಳವನ್ನು ನೀಡಿಲ್ಲದಿದ್ದರೂ ಕೂಡ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.